International Journal of Kannada Research 2018; 4(1): 71-73

International Journal of Kannada Research
www.kannadajournal.com

ISSN: 2454–5813
IJKR 2018; 4(1): 71-73
© 2018 IJKR
www.kannadajournal.com
Received: 13-11-2017
Accepted: 14-12-2017

**ಮಲ್ಲಪ್ಪ ಕುರಿ**
ಸಂಶೋಧನಾ ವಿದ್ಯಾರ್ಥಿ, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ

**ಡಾ. ಗುಂಡಣ್ಣ ಕಲಬುರ್ಗಿ**
ಪ್ರಾಧ್ಯಾಪಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

**Correspondence**
**ಮಲ್ಲಪ್ಪ ಕುರಿ**
ಸಂಶೋಧನಾ ವಿದ್ಯಾರ್ಥಿ, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ

# ಚಂದ್ರಗುತ್ತಿ ರೇಣುಕಾಂಬೆಯ ಸಂಪ್ರದಾಯ

**ಮಲ್ಲಪ್ಪ ಕುರಿ, ಡಾ. ಗುಂಡಣ್ಣ ಕಲಬುರ್ಗಿ**

ಕರ್ನಾಟಕದಲ್ಲಿ ಚಂದ್ರಗುತ್ತಿಯೆಂಬ ಪುಟ್ಟ ಹಳ್ಳಿಯು ಶಿವಮೊಗ್ಗ ಜಿಲ್ಲೆಯ ಸೊರಬಯೆಂಬ ತಾಲೂಕಿನಲ್ಲಿದೆ. ಅದು ಶಿವಮೊಗ್ಗದಿಂದ ಸುಮಾರು ಒಂದು ನೂರು ಕಿ.ಮೀ. ದೂರದಲ್ಲಿದೆ. ಇದೊಂದು ತುಂಬಾ ಬಡಹಳ್ಳಿ. ನಗರ ಜೀವನದಿಂದ ದೂರವಿರುವ ಜನ ಅತ್ಯಂತ ಹಿಂದುಳಿದವರಾಗಿದ್ದಾರೆ. ಊರಿನ ಸುತ್ತ ದಟ್ಟವಾಗಿ ಗಿಡ ಮರಗಳು ಆವರಿಸಿಕೊಂಡಿವೆ. ಈ ಊರಿನಲ್ಲಿ ನೋಡುವಂತ ಪ್ರವಾಸಿ ತಾನವಲ್ಲದಿದ್ದರೂ, ವರ್ಷಕ್ಕೊಮ್ಮೆ ಲಕ್ಷಾಂತರ ಜನ ಇಲ್ಲಿ ಸೇರುತ್ತಾರೆ. ಏಕೆಂದರೆ ಪುರಾತನ ಕಾಲದಿಂದಲೂ ಪ್ರಸಿದ್ಧವಾದ “ರೇಣುಕಾಂಬೆ”ಯ ದೇವಾಲಯವಿದೆ. ಇಲ್ಲಿ “ಬೆತ್ತಲೆ ಸೇವೆಯು” ಕೂಡ ಅಷ್ಟೇ ಪ್ರಾಚೀನವಾದುದ್ದು. ಅಂದಿನಿಂದ ಇಂದಿನವರೆಗೆ ನಿರಂತರವಾಗಿ ನಡೆದುಕೊಂಡು ಬಂದಿದೆ. 1986ರಲ್ಲೂ ಈ ಪದ್ಧತಿಯನ್ನು ಸುತ್ತ ಮುತ್ತಲಿನ ಪ್ರದೇಶದ ಜನ ಆಚರಿಸುತ್ತಿದ್ದರು!

ಊರಿನ ಪಶ್ಚಿಮ ದಿಕ್ಕಿಗೆ ಒಂದುವರೆ ಫರ್ಲಾಂಗ್ ದೂರದಲ್ಲಿ ದೇವಾಲಯವಿದೆ. ಗುಡ್ಡದ ಮೇಲೆ ದೇವಾಲಯವಿದೆ ದೇವಾಲಯಕ್ಕೆ ಹೋಗುವ ದಾರಿಯಲ್ಲಿಯೇ ದೇವಾಲಯ ಸಮಿತಿಯ ಕಛೇರಿ. ಗುಡ್ಡದಿಂದ ಕೆಳಗೆ ಚಿಕ್ಕ ಬಾವಿಯಿದೆ. ಇದಕ್ಕೆ ಪವಿತ್ರ ಜಲವೆನ್ನುವರು. ಸುತ್ತ ಮುತ್ತ ಗುಡ್ಡ, ಗಿಡ ಮರಗಳು ತುಂಬಿವೆ. ಮುಖ್ಯ ಗುಡ್ಡದ ಮೇಲೆ ದೊಡ್ಡದಾದ ಬಂಡೆಗಲ್ಲು ಉಂಟು. ದೇವಾಲಯವನ್ನು ತಲುಪಬೇಕಾದರೆ, ಬೆಟ್ಟದ ಮೇಲೆ ಸುಮಾರು ನೂರಾತೊಂಬತ್ತೇಳು ಮೆಟ್ಟಲುಗಳನ್ನು ಹತ್ತಬೇಕು. ಮೇಲೇರಿ ಹೋಗುವಾಗ 15–20 ಅಡಿಗಳಂತರದಲ್ಲಿ ಎಡಭಾಗ ಅನೇಕ ಚಿಕ್ಕ ಚಿಕ್ಕ ಮಂದಿರಗಳು ಕಾಣುತ್ತವೆ. ಈ ಮಂದಿರಗಳ ಪಕ್ಕಕ್ಕೆ ಹತ್ತು ಅಡಿಗಳಷ್ಟು ದೂರದಲ್ಲಿ ಎಡಬದಿಗೆ ಮಾತಂಗಿ ಮಂದಿರ. ಇದರ ಎದುರಿಗೆ ನಾಗನಾಥ ಮಂದಿರ ಮತ್ತು ಬಲಬದಿಗೆ ಪರಶುರಾಮನ ಮಂದಿರಯಿದೆ.

ಒಂದು ಗುಹೆಯೇ ರೇಣುಕಾಂಬೆಯ ದೇವಾಲಯವಾಗಿದೆ. ಭೂಮಿಯ ತಳಮಟ್ಟದಿಂದ ಒಂದೂವರೆ ಸಾವಿರ ಅಡಿಗಳಷ್ಟು ಮೇಲಿದೆ. ಗುಡ್ಡದಲ್ಲಿ 40 ರಿಂದ 50 ಚದರ ಅಡಿಗಳಷ್ಟು ವಿಸ್ತಾರವಾದ ಬಂಡೆಗಲ್ಲಿನಲ್ಲಿ ದೇವಾಲಯವಿದೆ. ನಾಲ್ಕೈದು ಅಡಿಗಳಷ್ಟು ಮುಂಚಾಚಿ ನಿಂತಿದೆ. ಈ ಮುಂದೆ ಚಾಚಿದ ಕಲ್ಲಿನ ಒಂದು ಭಾಗದ ಆಕಾರ ಅರ್ಧ ಚಂದ್ರಾಕಾರವಾಗಿದೆ. ಈ ಮುಖ್ಯ ಕಲ್ಲಿನ ಕೆಳಗಿನ ಬದಿಗೆ ಐದು ಅಡಿ ಅಗಲ, ಎರಡು ಅಡಿ ಎತ್ತರ, ಏಳು ಅಡಿ ಉದ್ದದ ಗುಹೆಯಿದೆ. ಈ ‘ಗುಹೆ’ ಅಂದರೆ ಮುಖ್ಯ ಬಂಡೆಗಲ್ಲಿನಲ್ಲಿರುವ ಕೊರಕಲೇ ಆಗಿದೆ. ಅಲ್ಲಿಯೇ ದೇವಿಯ ನಿವಾಸ ಸ್ಥಾನ. ಈ ದೇವಾಲಯದ ಮೇಲೆ ಬೃಹತ್ ಮುಂಚಾಚಿದ ಬಂಡೆಗಲ್ಲಿನ ಮೇಲೆಯೇ ಕಳಸವನ್ನು ಇಡಲಾಗಿದೆ. ಈ ದೇವಿಯ ಮೂರ್ತಿ ನೋಡಲು ಎಲ್ಲರೂ ಕೆಳಬಾಗಲೆಬೇಕು. ಏಕೆಂದರೆ ಗುಹೆಯ ವ್ಯಾಸ ಕಡಿಮೆ ಇರುವುದರಿಂದ ನಿಂತುಕೊಂಡು ನೋಡಿದರೆ ಮೂರ್ತಿಯ ಎದೆಯ ಕೆಳಗಿನ ಭಾಗ ಮಾತ್ರ ಕಾಣಿಸುತ್ತದೆ. ಪರಿಪೂರ್ಣ ಮೂರ್ತಿಯ ದರ್ಶನವಾಗುವುದಿಲ್ಲ.

ಈ ದೇವಾಲಯದ ಬಗ್ಗೆ ಶ್ರೀ ರೇಣುಕಾಂಬೆಯ ಭಕ್ತರನ್ನು ಮತ್ತು ದೇವಾಲಯದ ಸಮಿತಿಯವರನ್ನು ಕೇಳಿದಾಗ; ಇದು “ಎಂಟನೇ” ಶತಮಾನದ್ದು ಎಂದು ಹೇಳುತ್ತಾರೆ. ಆದರೆ ಪುರಾತತ್ವ ಸಂಶೋಧನ ಇಲಾಖೆಯವರು ಪ್ರಕಾರ ‘ಹದಿನಾಲ್ಕನೆಯ’ ಶತಮಾನದ್ದು. ಏನೇ ಇರಲಿ. ‘ಬೆತ್ತಲೆ’ ಸೇವೆ ಮಾತ್ರ ಈ ರೇಣುಕಾಂಬ ದೇವಿಗೆ ತೀರ ಹಿಂದಿನಿಂದ ನಡೆದುಕೊಂಡು ಬಂದಿರುವ ವಿಷಯವಾಗಿದೆ. ಅದರ ಜೊತೆಗೆ ಈ ದೇವಿ ಇಲ್ಲಿ ಹೇಗೆ ಬಂದು ನೆಲಸಿದಳು ಎನ್ನುವುದಕ್ಕೆ ಹಲವಾರು ದಂತ ಕತೆಗಳು ಇವೆ. “ಒಮ್ಮೆ ರೇಣುಕಾಂಬೆಗೆ ಒಬ್ಬ ದೈತ್ಯ ಬೆನ್ನು ಹತ್ತಿದಾಗ ಆಕೆ ಆತನಿಂದ ತಪ್ಪಿಸಿಕೊಂಡು ಓಡತೊಡಗಿದಳು. ಓಡುತ್ತಿರುವಾಗಲೇ ಆಕೆಯ ಮೈ ಮೇಲಿನ ಬಟ್ಟೆಗಳೆಲ್ಲ ಬಿದ್ದು ಬಿಟ್ಟವು. ಕೊನೆಗೆ ಆಕೆ ಚಂದ್ರಗುತ್ತಿಯ ಗುಡ್ಡದ ಗುಹೆಯಲ್ಲಿಎ ಅಡಗಿ ಕುಳಿತುಕೊಂಡಳು.

ಅಂದಿನಿಂದ ಆಕೆ ಅಲ್ಲಿಯೇ ಉಳಿದಳು ಎಂಬ ದಂತಕಥೆ ಇದೆ. ಆದರೆ ಪರಶುರಾಮ ತನ್ನ ತಂದೆಯನ್ನು ಕೊಂದ ಶತೃಗಳ ಕುಲವನ್ನು ನಾಶ ಮಾಡುವುದಕ್ಕಾಗಿ ಪೃಥ್ವಿ ಪ್ರದಕ್ಷಿಣೆಗೆ ಹೊರಟು ನಿಂತು. ತಾನು ಹೋದ ಮೇಲೆ ತನ್ನ ತಾಯಿ ಸಉರಕ್ಷಿತವಾಗಿರಬೇಕೆಂದುಕೊಂಡು ಆತನೇ ರೇಣುಕಾಂಬೆಯನ್ನು ಈ ಗುಹೆಯ ಒಳಗೆ ತಂದು ಬಿಟ್ಟ ಎಂಬುದಾಗಿ ಮತ್ತೊಂದು ಕಥೆ ಹೇಳುತ್ತದೆ! ಆದರೆ ದೇವಿಯ ವಾಸ್ತವ್ಯ ಈ ಜಾಗದಲ್ಲಿ ರೇಣುಕಾಂಬೆಯ ಮೂರ್ತಿಯ ಪಕ್ಕವೇ ಶಿವನ ಪ್ರತೀಕವಾಗಿರುವ ಲಿಂಗವಿದೆ. ರೇಣುಕಾಂಬೆ ಸಂಕಷ್ಟದಲ್ಲಿರುವಾಗ ಈ ಲಿಂಗ (ಸಾಕ್ಷಾತ್ ಶಿವನೇ) ದೇವಿಯನ್ನು ರಕ್ಷಣೆ ಮಾಡಿದ್ದಾನೆ. ದೇವಾಲಯ ಮೇಲಿರುವ ಮುಂಚಾಚು ಕಲ್ಲಿನ ಆಕಾರ ಕೂಡ ಹಾವಿನ ಹೆಡೆಯಂತೆ ಕಾಣುತ್ತದೆ. ದೇವಿಯ ರಕ್ಷಣೆಗಾಗಿ ನಾಗರಾಜ ಕೂಡ ಇದ್ದ ಎಂಬುದಾಗಿ ಭಕ್ತರು ಭಾವಿಸುತ್ತಾರೆ. ದೇವಿಯನ್ನು ಶಿವನೇಶ್ವರಿ, ಶಕ್ತಿಮಾತಾ ಎಂಬುದಾಗಿಯೂ ಕರೆಯಲಾಗುತ್ತದೆ. ಲಿಂಗವನ್ನು ಉದ್ಭವಲಿಂಗ ಎಂದು ಭಾವಿಸಲಾಗಿದೆ. ಈ ಪ್ರಕಾರ ಲಿಂಗಗಳು ಕ್ವಚಿತ್ತಾಗಿ ಕಂಡುಬರುತ್ತವೆ ಎಂಬುದು ಭಕ್ತರ ಅಭಿಪ್ರಾಯವಾಗಿದೆ.

**ಜಾತ್ರೆಯ ವಿಶೇಷತೆ:**

ಜಾತ್ರೆಯ ಬಗೆಗೆ ಮತ್ತು ದೇವಿಯ ಬಗೆಗೆ ಬಹಳಷ್ಟು ಮಾಹಿತಿಗಳು ದೊರೆಯುತ್ತವೆ. ಬೆತ್ತಲೆ ಸೇವೆಯ ಜೊತೆಗೆ ಇನ್ನಿತರ ಸೇವೆಗಳು ಜಾತ್ರೆಯಲ್ಲಿ ಜರಗುತ್ತವೆಂದು ಪೂಜಾರಿಗಳು ಹೇಳಿದರು.

1) **ಬೇವಿನ ಉಡುಗೆ:** ಬೇವಿನ ಎಲೆಗಳಿಂದ ಇಡೀ ದೇಹವನ್ನು ಮುಚ್ಚಿಕೊಂಡು ದೇವಾಲಯದವರೆಗೆ ನಡೆಯುತ್ತ ಹೋಗುವುದು. ಇಂಥ ಭಕ್ತರ ದೇಹದ ಮೇಲೆ ಬಟ್ಟೆಯ ಬದಲಿಗೆ ಬೇವಿನ ಉಡಿಗೆ ಇರುತ್ತದೆ.
2) **ಗಂಧದ ಉಡುಗೆ:** ಇಡೀ ದೇಹಕ್ಕೆ ಗಂಧವನ್ನು ಹಚ್ಚಿಕೊಂಡು ಹೋಗುವುದು.
3) **ಹೂವಿನ ಉಡುಗೆ:** ಮೈಮೇಲೆ ಬಟ್ಟೆಯ ಬದಲಿಗೆ ಹೂವು ಅಥವಾ ಹೂವಿನ ಹಾರಗಳಿಂದ ಮೈ ಮುಚ್ಚಿಕೊಂಡು ದೇವಿಯ ದರ್ಶನ ಪಡೆಯುವುದು.
4) **ದೀರ್ಘದಂಡ ನಮಸ್ಕಾರ:** ದಂಡವತ ಹಾಕುತ್ತ ದೇವಿಯ ದರ್ಶನಕ್ಕೆ ಹೋಗುವುದು.
5) **ವೆರಲಾವರತಿ:** ಅಂಗೈಯಲ್ಲಿ ಉರಿಯುವ ಹಣತೆಗಳನ್ನು ಹಿಡಿದುಕೊಂಡು ದೇವಿ ದರ್ಶನ ಮಾಡುವುದು.
6) **ಶಸ್ತ್ರಧಾರಿ ಸವಡ:** ನಾಲಿಗೆಗೆ ಸೂಚಿ ಚುಚ್ಚಿಕೊಂಡು ದೇವಿಗೆ ಹೋಗುವುದು.
7) **ತುಲಾಭಾರ:** ವ್ಯಕ್ತಿಯ ತೂಕದಷ್ಟು ಧಾನ್ಯ, ಬಟ್ಟೆ, ಹಾಲು, ಹಣ, ತೆಂಗಿನಕಾಯಿ ಮೊದಲಾದವುಗಳನ್ನು ದೇವಿಗೆ ಅರ್ಪಿಸುವುದು.

ಜಾತ್ರೆ ಐದು ದಿನಗಳವರೆಗೆ ನಡೆಯುತ್ತದೆ. ಈ ಕಾಲಾವಧಿಯಲ್ಲಿಯೇ ಈ ಎಲ್ಲಾ ವಿಧಿಗಳು ನೆರವೇರುತ್ತವೆ.

ಚಂದ್ರಗುತ್ತಿಯಲ್ಲಿಯು ರೇಣುಕಾಂಬೆಗೆ ದೇವದಾಸಿಯರನ್ನು ಬಿಡುವುದು ಕಂಡುಬರುತ್ತದೆ. ಈ ದೇವಿಯ ದಾಸಿಯರಾಗಿರುವಂತಹ, ಜೋಗಪ್ಪ ಮತ್ತು ಜೋಗಮ್ಮನವರು ದೇವಿಯ ಮಹಿಮೆ ಬಗ್ಗೆ ಪ್ರಚಾರ ಮಾಡುತ್ತ, ಭಕ್ತರನ್ನು ದೇವಿಯಡಿಗೆ ಸೆಳೆಯುತ್ತಾರೆ. ಚಂದ್ರಗುತ್ತಿಯಲ್ಲಿಯೂ ಕೂಡಾ, ಸವದತ್ತಿ, ಕೊಕಟನೂರ, ಉಚ್ಚಂಗಿದುರ್ಗ, ದಂತೆ ದೇವದಾಸಿಯರ ವಿಧಿ ವಿಧಾನಗಳು ನೇರವೇರುತ್ತವೆ.

ಚಂದ್ರಗುತ್ತಿಯಲ್ಲಿ ಬೆತ್ತಲೆಯಾಗಿ ದೇವಿಯ ದರ್ಶನಕ್ಕೆ ಹೋಗುವುದು ತುಂಬಾ ಕಠಿಣ ವ್ರತ ಎಂದು ಭಾವಿಸಲಾಗಿದೆ. ಈ ಸೇವೆಯನ್ನು ಪೂರೈಸಿದರೆ ಜೀವನದಲ್ಲಿ ಎದುರಾಗುವ ಎಲ್ಲ ತೊಂದರೆಗಳು ನಿವಾರಣೆಯಾಗುತ್ತವೆ. ಬಹಳ ಬೇಗ ದೇವಿಯ ಕೃಪೆಯಾಗುತ್ತದೆಂದು ಭಕ್ತರು ನಂಬಿದ್ದಾರೆ. ಆದರೆ ಒಮ್ಮೆ ಯಾರಾದರೂ ಬಂದು ಈ ಬೆತ್ತಲೆ ಸೇವೆಯನ್ನು ಪ್ರಾರಂಭಿಸಿದರೆ, ಆ ಒಂದು ಸೇವೆ ಅವರ ಮನೆತನದ ಪೀಳಿಗೆಯಿಂದ ಪೀಳಿಗೆಯವರೆಗೆ ಉಳಿಸಿಕೊಂಡು ಬರಬೇಕಾಗುತ್ತದೆಂಬ ಧಾರ್ಮಿಕ ನಿಯಮವೇ ಆಗಿದೆ. ಒಂದು ವೇಳೆ ಈ ಪದ್ಧತಿಯನ್ನು ಪಾಲಿಸದಿದ್ದರೆ ಮನೆಯಲ್ಲಿ ಸಂಕಷ್ಟಗಳು ಎರಗುತ್ತವೆ, ಮಹಾರೋಗಗಳು ಅಮರಿಕೊಳ್ಳುತ್ತವೆ. ದನ ಕರುಗಳು ಸಾಯುತ್ತವೆ. ಹೀಗೆ ನಾನಾ ವಿಧದ ಮೂಢನಂಬಿಕೆಗಳು ಈ ಭಾಗದ ಜನರಲ್ಲಿ ಮನೆ ಮೂಡಿವೆ. ದೇವಿಗೆ ಮೀಸಲು ಬಿಟ್ಟ ಜೋಗಪ್ಪ ಮತ್ತು ಜೋಗಮ್ಮನವರು; ಜನರು ಏನಾದರೂ ತೊಂದರೆ ಎಂದು ಬಂದರೆ ಅದಕ್ಕೆ ಪರಿಹಾರ ಹೇಳುತ್ತಾರೆ. ಇವರು ತಮ್ಮ ದೇಹದಲ್ಲಿ ದೇವಿ ಬಂದಂತೆ ನಟಿಸುತ್ತಾರೆ. ತೊಂದರೆಗಳು ನಿವಾರಣೆಯಾಗಬೇಕಾದರೆ ಬೆತ್ತಲೆ ಸೇವೆ ಮಾಡುವಂತೆ ಸಲಹೆ ನೀಡಿ, ಇದು ದೇವಿಯ ಆಶಯವೇ ಆಗಿದೆ ಎಂಬುದಾಗಿ ಆಕೆ ಹೇಳುತ್ತಾಳೆ. ಏನೇಯಾದರೂ ಅಲ್ಲಿಯ ಭಕ್ತರಲ್ಲಿ ಮತ್ತು ದೇವದಾಸಿಯರಲ್ಲಿ ಮೂಢ ನಂಬಿಕೆ ತುಂಬಿ ತುಳುಕುತ್ತಿದೆ. ಇಂತಹ ಮೂಢನಂಬಿಕೆಗಳನ್ನು ಹೋಗಿಲಾಡಿಸಲು ಬಂದ ಸಾಮಾಜಿಕ ಕಾರ್ಯಕರ್ತರು ಸೋತು ಸುಣ್ಣವಾಗಿದ್ದಾರೆ.

ಒಮ್ಮೆ ಉತ್ತಮ ಕಾಂಬಳೆ ಎಂಬ ವ್ಯಕ್ತಿ ಮರಾಠಿ ಲೇಖಕರು "ಸಕಾಳ" ಎಂಬ ಮರಾಠಿ ದಿನ ಪತ್ರಿಕೆಯ ವರದಿಗಾರನಾಗಿ ಹೋಗಿ, ಅಲ್ಲಿಯ ಸಂಪ್ರದಾಯ ಮತ್ತು ಭಕ್ತರ ಮೂಢನಂಬಿಕೆಯ ಬಗೆಗೆ ವರದಿಯನ್ನು ಸಲ್ಲಿಸುತ್ತಾರೆ. ಅಲ್ಲಿಯ ಸಿಹಿ, ಕಹಿ, ಅನುಭವ ಮತ್ತು ಅವರು ಅಲ್ಲಿ ಭಕ್ತರಿಂದ ತಿಂದ ಹೊಡೆತ ವಿಶ್ಲೇಷಿದಾಗ, ಆ ಪ್ರದೇಶದ ಜನರನ್ನು ರೇಣುಕಾಂಬೆಯ ಭಕ್ತರನ್ನು ತಿದ್ದಲು ಸಾಧ್ಯವಿಲ್ಲ ಎಂದೆನಿಸುತ್ತದೆ. ಅವರನ್ನು ಆ ಚಂದ್ರಗುತ್ತಿಯ ರೇಣುಕಾಂಬೆಯೇ ಕಾಪಾಡಬೇಕು ಎನ್ನುಸುತ್ತದೆ. ಅದೇ ರೀತಿ ಕರ್ನಾಟಕದ ಹಲವಾರು ಮಾಧ್ಯಮದ ವರದಿಗಾರರು ಹೋಗಿ ಬೆತ್ತಲೆ ಸೇವೆ ಮಾಡಬಾರದು ಅಪರಾಧವೆಂದು ಹೇಳಿ ಹೊಡೆತ ತಿಂದ ಉದಾಹರಣೆಗಳು ಸಾಕಷ್ಟಿವೆ. ಹಾಗೆಯೇ ಜಾತ್ರೆ ಸಮಯದಲ್ಲಿ ಸಾಮಾಜಿಕ ಕಾರ್ಯಕರ್ತರು ಈ ಬೆತ್ತಲೆ ಸೇವೆಯನ್ನು ತಡೆ ಹಿಡಿಯಬೇಕೆಂದು ಭಕ್ತರ ಮನ ಒಲಿಸಲು ಹೋರಾಟ ಕೊನೆಗೆ ಹೊಡೆತ, ಒದೆ ತಿಂದು, ಮಾರನಾಂತಿಕ ಹಲ್ಲೆಗೆ ಒಳಗಾಗಿ ಓಡಿ ಹೋಗಿದ್ದಾರೆ. ಇಷ್ಟೆಲ್ಲ ಆದರೂ ಬೆತ್ತಲೆ ಸೇವೆ ಮಾತ್ರ ಪುರಾತನ ಕಾಲದಿಂದ ನಡೆದುಕೊಂಡು ಬಂದಿರುವುದಾಗಿ ಕಾಣುತ್ತೇವೆ.

ಈ ಬೆತ್ತಲೆ ಸೇವೆಯ ಬಗೆಗೆ ಬುದ್ಧಿ ಜೀವಿಗಳು ಹೀಗೆ ಹೇಳುತ್ತಾರೆ. ಇದರ ಹಿಂದ ಮೇಲ್ಜಾತಿಯ ಜನರ ಕೈವಾಡ ಪರೋಕ್ಷವಾಗಿದೆ ಮತ್ತು ಆರ್‌ಎಸ್ಸೆಸ್ ಕೈವಾಡ ವಿದೆಯೆಂದು ಆರೋಪ ಮೇಲಿಂದ ಮೇಲೆ ಕೇಳಿಬರುತ್ತಿವೆ. ಏನೇಯಾಗಲಿ ಇವರೆಲ್ಲರ ಕೈವಾಡವೂ, ಜನರ ಮೂಡನಂಬಿಕೆಯೂ, ಪೂಜಾರಿಗಳ ಮತ್ತು ಅಲ್ಲಿಯ ವ್ಯವಹಾರಿಗಳ ಸ್ವಾರ್ಥವೊ ಹಾಗೂ ದೇವದಾಸಿಯರ ಹೊಟ್ಟೆ ಪಾಡೊ ಗೊತ್ತಾಗುತ್ತಿಲ್ಲ. ಸರಕಾರ ಈ ಆಚರಣೆಯನ್ನು ನಿಲ್ಲಿಸಬೇಕೆಂದರೂ ಇದುವರೆಗೂ ಸಾಧ್ಯವಾಗಲಿಲ್ಲ. ಇತ್ತೀಚೆಗೆ ತುಂಬಾ ಕಡಿಮೆಯಾಗಿದೆಯೆಂದು ಹೇಳಲು ಹೋದರೆ, ಅಲ್ಲಿ ಇಲ್ಲಿ ಸ್ವಲ್ಪ ತೆರೆಯ ಮರೆಯಲ್ಲಿ ಈ ಬೆತ್ತಲೆ ಸೇವೆ ಮತ್ತು ದೇವದಾಸಿ ಬಿಡುವ ಪದ್ಧತಿ ಇನ್ನೂ ನಡೆಯುತ್ತಲೇ ಇದೆ. ಇದು ಸಂಪೂರ್ಣ ಕಡಿಮೆಯಾಗಬೇಕು ಇದನ್ನು ಕಡಿಮೆ ಮಾಡಲು ಹೋದವರು ತೊಂದರೆಗೊಳಗಾಗಿ ಸೋತುಹೋಗಿದ್ದಾರೆ. ಈ ಪದ್ಧತಿ ಕಡಿಮೆಯಾಗಬೇಕಾದರೆ ಜನರು (ಭಕ್ತರು) ಮನಸ್ಸು ಮಾಡಬೇಕು. ವಿದ್ಯಾವಂತರಾಗಬೇಕು, ಮೂಢನಂಬಿಕೆಯಿಂದ ಹೊರಬಂದು, ಸರಕಾರದ ಸೌಲಭ್ಯ ತೆಗೆದುಕೊಂಡು ಹೊಸ ಬದುಕು ಕಟ್ಟಿಕೊಳ್ಳಬೇಕು.

ಹೀಗೆ **"**ಬೆತ್ತಲೆ ಸೇವೆ**"** ಪರಂಪರೆಯಿಂದ ಬಂದರೂ ಕೂಡ ಭಕ್ತರು ದೇವಿಯ ಹರಕೆಯ ತೀರಿಸಲು ಹೀಗೆ ನಗ್ನವಾಗಿ ಬರುವುದನ್ನು ಬಿಟ್ಟು ಮಡಿಯಿಂದ ಸುಚಿಯಾದ ತೊಡುಗೆಗಳನ್ನು ತೊಟ್ಟು ದೇವಿಯ ಹರಕೆ ಮುಟ್ಟಿಸಿದರೆ ಸಾಕು. ದೇವಿ ಮೆಚ್ಚಿಕೊಳ್ಳುತ್ತಾಳೆ. ಶಾಪವಂತು ಕೊಡುವುದಿಲ್ಲ. ಇಂತಹ ಮೂಢನಂಬಿಕೆಯಿಂದ ಭಕ್ತರು ಹೊರಬಂದು ಹೊಸ ಮನುಷ್ಯರಾಗಬೇಕೆಂಬುದೆ ಈ ಲೇಖನದ ಆಸೆಯಾಗಿದೆ.

**ಆಧಾರಗ್ರಂಥಗಳು**

1. ದೇವದಾಸಿ ಮತ್ತು ಬೆತ್ತಲೆ ಸೇವೆ– ಮೂಲ ಮರಾಠಿ: ಉತ್ತಮ ಕಾಂಬಳೆ, ಕನ್ನಡಕ್ಕೆ: ಡಾ. ಸಿದ್ರಾಮ ಕಾರಣಿಕ.
2. ಸವದತ್ತಿ ಎಲ್ಲಮ್ಮ ಮತ್ತು ದೇವದಾಸಿ ಪದ್ಧತಿ: ಒಂದು ಸಾಂಸ್ಕೃತಿಕ ಅಧ್ಯಯನ– ಡಾ. ಕಮಲಾ ಹಮ್ಮಿಗೆ.